# ಮಡಿವಾಳ ಮಾಚಿ ದೇವರವರ ಜೀವನ ಹಾಗೂ ಸಾಧನೆ

**ವಾಣಿ ಡಿ. ಎಸ್.**

ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾಪುರ, ಕುಮಟಾ ರಸ್ತೆ, ಉತ್ತರ ಕನ್ನಡ.

**Received: 18-06-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284156**

**ABSTRACT:**

ಹನ್ನೆರಡನೇ ಶತಮಾನ ಭಾರತೀಯ ಹಾಗೂ ಕರ್ನಾಟಕದ ಇತಿಹಾಸದಲ್ಲಿ ಬಹುಮುಖ್ಯ ಕಾಲಘಟ್ಟ. ಆ ಕಾಲದ ಶಿವಶರಣರು ಜೀವನದ ಹೊಸ ಮೌಲ್ಯಗಳನ್ನು ಎತ್ತಿ ಹಿಡಿದು ವರ್ಣಾಶ್ರಮ, ಧರ್ಮಗಳ ಹಂಗನ್ನು ಕಿತ್ತು ಬಿಸುಟು ಸಮತಾ ತತ್ವದ ತಳಹದಿಯ ಮೇಲೆ ಸಮಾಜವನ್ನು ನಿರ್ಮಿಸಲು ಹೆಣಗಿದವರು. ಸೃಷ್ಟಿಯಲ್ಲಿ ಎಲ್ಲರೂ ಸಮಾನರು ಮೇಲು-ಕೀಳು, ಲಕ್ಷಿತ-ಅಲಕ್ಷಿತ, ಸ್ತ್ರೀ-ಪುರುಷರೆಂಬ ಬೇಧ ಭಾವವಿಲ್ಲ ಎಂಬ ತತ್ವವನ್ನು ಬೋಧಿಸಿ ತಮ್ಮದೇ ಆದ ವಿಶಿಷ್ಟ ಧರ್ಮವನ್ನು ಬಸವಾದಿ ಪ್ರಮಥರು ಸಾಧಿಸಿದರು. ತಮ್ಮ ವೃತ್ತಿಯ ಹಿನ್ನೆಲೆಯಲ್ಲಿ ವರ್ಗ, ವರ್ಣ, ಜಾತಿಗಳಿಲ್ಲದ ಸರ್ವ ಸಮಾನತೆಯ ಹೊಸ ಸಮಾಜದ ನಿರ್ಮಾಣಕ್ಕೆ ಅವರು ಶ್ರಮಿಸಿದರು. ಅಂತಹ ವಚನಕಾರ ಮತ್ತು ಕ್ರಾಂತಿಕಾರರಲ್ಲಿ ಪ್ರಮುಖರಾದವರು ಮಡಿವಾಳ ಮಾಚಿದೇವ. ಇವರು ಬಸವಣ್ಣನಂತಹ ಮಹಾನುಭಾವರೊಂದಿಗೆ ಜೊತೆಗೂಡಿ ಸಮಾಜವನ್ನು ತಿದ್ದುವಂತಹ ಕೆಲಸಕ್ಕೆ ಹೋರಾಟದ ಮೂಲಕ ಕೈ ಜೋಡಿಸಿದರು.

**KEYWORDS:**

ಸಮತಾ ತತ್ವ, ವರ್ಣಾಶ್ರಮ, ಲಕ್ಷಿತ-ಅಲಕ್ಷಿತ, ದೇವಾಂಶ ಸಂಭೂತ, ವೀರಘಂಟೆ, ಕುಚೋದ್ಯ.

ಮಡಿವಾಳ ಮಾಚಿದೇವ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ ದೇವರ ಹಿಪ್ಪರಗಿಯಲ್ಲಿ ಜನಿಸಿದರು. ತಂದೆ ಪರುವತಯ್ಯ. ತಾಯಿ ಸುಜ್ಞಾನವ್ವ. ಕಾಲ 1120-1130.

**ಮಾಚಿದೇವರ ಹುಟ್ಟಿನ ಹಿನ್ನೆಲೆ:**

ದಕ್ಷನನ್ನು ಸಂಹಾರ ಮಾಡಿ ಅತಿ ಉತ್ಸಾಹದಿಂದ ಶಿವನನ್ನು ಕಾಣಲು ವೀರಭದ್ರ ಶಿವನ ಸಭೆಯೊಳಗೆ ನಡೆದು ಬರುವಾಗ ಶಿವಭಕ್ತನಿಗೆ ಈತನ ಉತ್ತರೀಯ ಸೆರಗು ತಾಕುತ್ತದೆ. ವಿಜಯದ ಉದ್ವೇಗದಲ್ಲಿ ಆದ ತಪ್ಪಿಗೆ ಭೂಲೋಕದಲ್ಲಿ ಮಡಿವಾಳನಾಗಿ ಜನಿಸಿ ಶರಣರ ವಸ್ತ್ರಗಳನ್ನು ಮಡಿ ಮಾಡುವ ಕಾಯಕ ಪೂರೈಸಿ ದೋಷ ಮುಕ್ತನಾಗಿ ಬರುವಂತೆ ಶಿವನ ಆದೇಶವಾಗುತ್ತದೆ. ಮಾಚಿದೇವರನ್ನು ವೀರಭದ್ರನ "ದೇವಾಂಶ ಸಂಭೂತ ಅವತಾರ ಪುರುಷ" ನೆಂದು ನಿರೂಪಿಸಲಾಗಿದೆ.

ಮಾಚಯ್ಯ ಮಡಿವಾಳ ಕುಲದ ಸ್ಥಾಪಕನಲ್ಲ. ಆದರೆ ಮಡಿವಾಳ ಕುಲದಲೊಬ್ಬ ವಿಭೂತಿ ಪುರುಷನಾದ. ಅಲ್ಲೂ ಕೂಡ ಸಾಧನೆ ಮಾಡಬಹುದೆಂಬುದಕ್ಕೆ ಸಾಕ್ಷಿಯಾಗಿದ್ದಾನೆ. "ಎನ್ನ ಕುಲವಾದರೂ ಜಗದ ಕಸವ, ಮಲಿನವ ತೊಳೆಯುವಂತದ್ದು" ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಶೂದ್ರರಿಗೆಲ್ಲ ಶಿಕ್ಷಣ ನಿಷೇದಿಸಲ್ಪಟ್ಟ ಕಾಲದಲ್ಲಿ ಮಾಚಯ್ಯನಿಗೆ ಅಕ್ಷರ ಜ್ಞಾನ, ಸಕಲ ಶಾಸ್ತ್ರಗಳನ್ನು ಹೇಳಿಕೊಟ್ಟ ಗುರು ಮಲ್ಲಿಕಾರ್ಜುನಯ್ಯ ಸ್ವಾಮಿಗಳು. ನಿಜಕ್ಕೂ ಒಬ್ಬ ಕ್ರಾಂತಿಕಾರಿ ಗುರುಗಳಾಗಿದ್ದಾರೆ.

**ಮಾಚಿದೇವನ ಅಚಲ ಕಾಯಕ ನಿಷ್ಠೆ:**

ಹಿಮಾಲಯದಷ್ಟೂ ಧೃಡವಾಗಿದ್ದ ತನ್ನ ಕಾಯಕವೇ ಭಕ್ತಿ, ಜೀವದುಸಿರು ಎಂದು ನಂಬಿದ್ದ. ಶಿವಶರಣರ ಮತ್ತು ಕಾಯಕದಲ್ಲಿ ನಿಷ್ಠೆಯುಳ್ಳವರ ಮೈಲಿಗೆ ಬಟ್ಟೆಗಳನ್ನು ಮಡಿ ಮಾಡಿ ಮುಟ್ಟಿಸುವ ಕಾಯಕ ಇವನದಾಗಿತ್ತು. ಮಡಿ ಬಟ್ಟೆ ಹೊತ್ತುಕೊಂಡು 'ವೀರಘಂಟೆ' ಬಾರಿಸುತ್ತಾ ಭಕ್ತರಲ್ಲದವರು ತಮ್ಮನ್ನು ಮುಟ್ಟಬಾರದೆಂದು ನಿಯಮವನ್ನು ವಿಧಿಸಿಕೊಂಡಿದ್ದರು.

ಕುಚೋದ್ಯಕ್ಕೆ ಬಂದು ಮುಟ್ಟುವ ಭವಿಗಳನ್ನು ತುಂಡರಿಸಿ ಚೆಲ್ಲುತ್ತಾ ಮುಂದೆ ನಡೆಯುವುದು ಮಾಚಿದೇವರ ನಡತೆಯಾಗಿತ್ತು. ಭವಿಯೊರ್ವ ಮಡಿಗಂಟು ಮುಟ್ಟಿ ಮೈಲಿಗೆಗೊಳಿಸಿದ್ದಕ್ಕೆ ಆತನ ಶಿರವನ್ನು ಆಕಾಶಕ್ಕೆ ತೂರಿದ ಘಟನೆಯಿಂದಾಗಿ ಭಕ್ತಿಭಾವದಿಂದ ಮಡಿವಾಳಯ್ಯನನ್ನು ಜನರ ಗೌರವಿಸುತ್ತಿದ್ದರು. ಕಾಯಕ ಮಾಡದ ಸೋಮಾರಿಗಳ, ಬಡವರನ್ನು ಶೋಷಿಸುವವರ, ದುರ್ಗುಣವುಳ್ಳವರ ಬಟ್ಟೆಗಳನ್ನೆಂದು ಆತ ಮುಟ್ಟುತ್ತಿರಲಿಲ್ಲ. "ಅರಸುತನ ಮೇಲಲ್ಲ, ಅಗಸತನ ಕೀಳಲ್ಲ" ಎಂಬುದನ್ನು ಜನಕ್ಕೆ ಸಾರಿದರು.

ಕಾಯಕದೊಂದಿಗೆ ಸಮಾಜ ಸೇವೆ ಹಾಗೂ ಬಸವಣ್ಣನವರನ್ನು ಪ್ರಭಾವಗೊಳಿಸಿದ ಮಾಚಿದೇವ ಅಕ್ಕ ಮಹಾದೇವಿ, ಅಲ್ಲಮಪ್ರಭು, ಬಸವಣ್ಣ ಮುಂತಾದ ಶರಣರು ಅನುಭವಮಂಟಪದಲ್ಲಿ ಸುಮಾರು 780 ಶರಣರ ಗಣ ಅನುಭವಮಂಟಪದಲ್ಲಿ ನೆರೆದು ಚಿಂತನ-ಮಂಥನದಲ್ಲಿ ತೊಡಗಿರುತ್ತಾರೆ. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕುತ್ತ ಕ್ರಾಂತಿಯನ್ನು ಮಾಡುತ್ತಿರುವ ವಿಷಯ ಎಲ್ಲೋ ಇದ್ದಂತಹ ಸುಜ್ಞಾನಿಯಾಗಿದ್ದಂತಹ ಮಾಚಿದೇವರ ಕಿವಿಗೆ ಬಿದ್ದಿತು. ನನ್ನ ಕ್ಷೇತ್ರ ಇದೊಂದೇ ಅಲ್ಲ ಮಡಿವಾಳ ಕಾಯಕದೊಂದಿಗೆ ಶರಣ ತತ್ವವನ್ನು ಪ್ರಚಾರ ಮಾಡುವುದರಲ್ಲಿ ನಾನು ಭಾಗಿಯಾಗಬೇಕೆಂದು ಹೊರಡುತ್ತಾನೆ. ಬಸವಣ್ಣನವರನ್ನು ನೋಡಬೇಕೆಂಬ ಉತ್ಸುಕತೆ, ತವಕ ಎಷ್ಟಿತ್ತೆಂದರೆ ಭೀಮಾ ನದಿಯೆಂಬ ನದಿ ಮೈತುಂಬಿ ಪ್ರವಾಹದಂತೆ ಹರಿಯತ್ತಿರುತ್ತದೆ. ಅಂಬಿಗನು ಕೂಡ ನದಿ ದಾಟಿಸಲು ಹಿಂಜರಿಯುತ್ತಾನೆ. ಅಂತಹ ಸಂದರ್ಭದಲ್ಲೂ ಮಾಚಿದೇವ ಜೀವದ ಹಂಗನ್ನು ತೊರೆದು ಪ್ರವಾಹದಲ್ಲೇ ಈಜಿ ದಡವನ್ನು ಸೇರುತ್ತಾನೆ. 'ಹರಿಗೋಲ ಹಂಗಿಲ್ಲದೆ ಶಿವನನ್ನು ನೆನೆಯಲು ನದಿ ಇಬ್ಭಾಗವಾಗುತ್ತದೆ' ಎಂಬ ಕಥೆಯಿದೆ. ಹೀಗೆ ಕಲ್ಯಾಣಕ್ಕೆ ಸೇರಿದ ಸಂದರ್ಭ ಹೇಗಿತ್ತೆಂದರೆ 'ಎರಡು ಮದಗಜಗಳು ಎದುರಾದಂತೆ ಬಸವಣ್ಣ ಮತ್ತು ಮಾಚಿದೇವರು ಪರಸ್ಪರ ಎದುರಾಗುತ್ತಾರೆ'. ಆ ಸಂದರ್ಭದಲ್ಲಿ ಬಸವಣ್ಣನವರು ಹೀಗೆ ಹೇಳುತ್ತಾರೆ

**"ಎನ್ನ ಕಾಯವ ಶುದ್ದಿ ಮಾಡಿದಾತ ಮಡಿವಾಳ**

**ಎನ್ನ ಮನವ ನಿರ್ಮಲ ಮಾಡಿದಾತ ಮಡಿವಾಳ**
**ಎನ್ನ ಅಂತರಂಗವ ಬೆಳಗಿದಾತ ಮಡಿವಾಳ**
**ಎನ್ನ ಬಹಿರಂಗವ ಬೆಳಗಿಸಿದಾತ ಮಡಿವಾಳ**
**ಕೂಡಲಸಂಗಮದೇವಯ್ಯ ಎನ್ನ ನಿಮಗೆ ಯೋಗ್ಯವ ಮಾಡಿದಾತ ಮಡಿವಾಳ"**

ಎಂದು ಬಿಜ್ಜಳನ ಆಸ್ಥಾನದ ಪ್ರದಾನಮಂತ್ರಿಯಾದಂತಹ ಬಸವಣ್ಣ ತೇಜೋಪುಂಜವಾದ ವ್ಯಕ್ತಿಯನ್ನು ನೋಡಿದಾಗ ಹೇಳಿದಂತಹ ಅಂತರಂಗದ ನುಡಿಗಳಾಗಿವೆ. ಬಸವಣ್ಣ ನಾನು ಕಲಿತದ್ದು ಸಂಪಾದನೆ ಮಾಡಿದ್ದು ನನ್ನಲ್ಲಿರುವ ವಿಶೇಷತೆಗಳಿಗೆಲ್ಲ ಯೋಗ್ಯತೆ ಲಭಿಸಿದ್ದು ಮಡಿವಾಳನಿಂದ, ಮಡಿವಾಳನೆಂಬ ಮಹಾತ್ಮ ಮಾಚಯ್ಯನ ರೂಪದಲ್ಲಿ ಬಂದಿದ್ದಾನೆ. ಎಂದು ಹೇಳುವಂತದ್ದು ಎಂತಹ ಮಾರ್ಮಿಕವಾಗಿದೆ.

ಮಾಚಯ್ಯ ಕೂಡ ಸಾಮಾನ್ಯನಲ್ಲ. ಮತ್ಸರದ ಲವಲೇಶವೂ ಇಲ್ಲ. ಮಾಚಯ್ಯ ಕೂಡ ಹೀಗೆ ಹೇಳುತ್ತಾನೆ:

**"ಕೋಟಿ ಸುಖವೂ ಎನಗೆ ಬಂದಿರಲು ನಾನು ಬಸವನೆನ್ನುವೆನಯ್ಯ**
**ಕೋಟಲೆಗಳು ನನಗೆ ಬಂದಿರಲು ಬಸವನೆನ್ನುವೆನಯ್ಯ**
**ನಾನು ಪೂಜೆಯ ಮಾಡುವಾಗಲು ಬಸವನೆನ್ನುವೆನಯ್ಯ**
**ನನಗೆ ಬಸವನನ್ನುಳಿದು ಮತ್ತಾವ ಹಂಗು ನನಗಿಲ್ಲವಯ್ಯ"**

ಎನ್ನುತ್ತಾನೆ. ಹೀಗೆ ಇಬ್ಬರೂ ಶ್ರೇಷ್ಠ ಶರಣರು ಪರಸ್ಪರ ಆಲಂಗಿಸಿಕೊಳ್ಳುತ್ತಾರೆ. ಬಸವಣ್ಣ ಯಾವಾಗಲೂ ಅವರನ್ನು ಮಾಚಯ್ಯನೆಂದು ಕರೆಯದೆ ಮಾಚಿದೇವ/ ಮಾಚಿತಂದೆ ಎನ್ನುತ್ತಾರೆ. ಇದು ಅಂತಹ ಬಸವಣ್ಣನವರ ಮನಸ್ಸನ್ನು ಸೆಳೆದಂತಹ ಮಾಚಿದೇವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಆ ಸಂದರ್ಭದಲ್ಲಿ ಭಕ್ತಿ ದಾಸೋಹ, ಅನ್ನ ದಾಸೋಹ, ಜ್ಞಾನ ದಾಸೋಹ ಎಂಬ ತ್ರಿವಿಧ ದಾಸೋಹಗಳು ನಡೆಯುತ್ತಿರುತ್ತವೆ. ಇಂತಹ ಶರಣ ತತ್ವದಲ್ಲಿ ಇವೆಲ್ಲವೂ ಕಾಯಕದಡಿಯಲ್ಲೇ ಮುಂದುವರೆಯುತ್ತಿರುತ್ತವೆ, ಇವರ್ಯಾರು ವೃತ್ತಿಯನ್ನು ತ್ಯಜಿಸಿ ಕೇವಲ ಪ್ರಚಾರಕ್ಕಾಗಿ ಇದರಲ್ಲಿ ಪಾಲ್ಗೊಂಡವರಲ್ಲ. ಹೀಗೆ ಶರಣತ್ವವನ್ನು ಮೈಗೂಡಿಸಿಕೊಂಡು ಶರಣ ಬಂಧುಗಳನ್ನು ಸತ್ಕರಿಸುತ್ತಾ ಶರಣತನವನ್ನು ಪ್ರಚಾರ ಮಾಡುತಿರುತ್ತಾರೆ.

### ನಿಷ್ಠುರವಾದಿ ಮಾಚಯ್ಯ:

ಒಮ್ಮೆ ಬಸವಣ್ಣನಿಗೆ ಆಕಸ್ಮಿಕವಾಗಿ ಈ ಭಾವನೆ ಬಂದು ಬಿಡುತ್ತದೆ. ಕಲ್ಯಾಣದಲ್ಲಿ ಶರಣರ ಮೇಳ ನಡೆಯುತ್ತಿರುತ್ತದೆ. ಆಗ ಬಸವಣ್ಣ ಇದಕ್ಕೆಲ್ಲ ನಾನೇ ಕಾರಣನೆಂದು ಬಗೆದು ಅಹಂ ಭಾವನೆಯಿಂದ ಹೀಗೆ ಹೇಳುತ್ತಾನೆ. "ಬೇಡುವ ಭಕ್ತರಿಲ್ಲದೆ ಬಡವಾದೆನಯ್ಯ" ಆಗ ನಿಷ್ಠುರತೆಗೆ ಹೆಸರಾದ ಮಾಚಿದೇವ "ಬಸವಣ್ಣನವರೇ ನೀವೊಬ್ಬರೇ ಮಹಾನ್ ದಾನಿಗಳೆಂದು ಭಾವಿಸಿದ್ದೀರಾ ಭಕ್ತರೇನು ಧರಿದ್ರರೇ, ಭಕ್ತರೇನು ಬಡತನದಿಂದ ನಿಮ್ಮ ಹಂಗಿಗಾಗಿ ನಿಂತವರೆ" ಎಂದು ಪ್ರಶ್ನಿಸುತ್ತಾನೆ. ಮುಂದೆ ಎನ್ನ ಮಹಾನುಭಾವರ ಬಡತನದಿರವ ನಿಮಗೆ ತೋರುವೆನೆಂದು ಪಾದದಿಂದ ನೀರನ್ನು ಚಿಮ್ಮಲು ಆ ನೀರ

ಹನಿಗಳೆಲ್ಲ ಮುತ್ತುರತ್ನಗಳಾದವು. ಹೀಗೆ ವಿನಯ, ಇಂದ್ರಿಯ ನಿಗ್ರಹ ನಿರಹಂಕಾರಗಳು ಭಕ್ತಿಯ ಕುರುಹು ಎಂದು ತಿಳಿಸುತ್ತಾ ಅಹಂಕಾರ ನಿರ್ಮೂಲನೆಗೊಳಿಸಿದ.

ನುಲಿಯಚಂದಯ್ಯ ಹುಲ್ಲನ್ನು ಕುಯ್ಯುವಾಗ ತನ್ನ ಎದೆಯ ಮೇಲಿದ್ದ ಇಷ್ಟಲಿಂಗ ಜಾರಿ ಕೆರೆಯೊಳಗೆ ಬೀಳುತ್ತದೆ. ಆ ಸಂದರ್ಭದಲ್ಲಿ ನುಲಿಯ ಚಂದಯ್ಯನು "ಭವದ ಲಿಂಗ ಹೋದರೇನಂತೆ ಆತ್ಮದ ಲಿಂಗವಿರುವುದಲ್ಲ!" ಎಂದು ಸಾಮಾಧಾನ ಪಟ್ಟುಕೊಳ್ಳುತ್ತಾನೆ. ಈ ವಿಷಯ ಮಾಚಿದೇವರಿಗೆ ತಿಳಿದಾಗ "ಅಲ್ಲಯ್ಯ ನೀನು ಲಿಂಗವ ಕಳೆದುಕೊಂಡೆಯಲ್ಲ ಮಧುವ ಸವಿಯಲು ಬೇಕು ಹಣ್ಣು ಸಿಪ್ಪೆ ಬೇಡವೆಂದರೆ ಹೇಗೆ?" ಎಂದು ಬಹಿರಂಗದ ಲಿಂಗದ ಬಗ್ಗೆ ಹೇಳುತ್ತಾನೆ. ಕೇಳುವ ಭಕ್ತ ಮತ್ತು ನೀಡುವ ಭಕ್ತನ ನಡುವೆ ಪೂಜಾರಿ ಇರುವಂತೆ ಮಧ್ಯವರ್ತಿ ಯಾಕೆ ಬೇಕು ನಮಗೆ ಎಂದು ಪ್ರಶ್ನಿಸುತ್ತಾರೆ. ಕಾಯಕತತ್ವದಲ್ಲಿ ನಂಬಿಕೆಯಿಟ್ಟು ಶರಣರು ಕೆಲಸ ತ್ಯಜಿಸಿ ದೇವರ ಪೂಜೆಯಲ್ಲಿ ನಿರತರಾಗುವುದು ವ್ಯರ್ಥ ಪ್ರಯತ್ನ ಎಂಬುದನ್ನು ಸಾರುತ್ತಾರೆ. ಪೂಜಾರಿಯ ಮೂಲಕ ಮನವಿ ಕೊಡಿಸುವುದು ಬೇಡ ಪ್ರತಿಯೊಬ್ಬನ ಆತ್ಮದಲ್ಲೂ ಭಗವಂತನಿದ್ದಾನೆ. ಎಂಬ ನಂಬಿಕೆಯಿಂದ ಎಲ್ಲರಿಗೂ ಲಿಂಗಧಾರಣೆ ಮಾಡುತ್ತಾರೆ. ದುರಂತವೆಂದರೆ ಅದೇ ಒಂದು ಪ್ರಬಲ ಜಾತಿಯಾಗಿ ಇಂದು ಗುರುತಿಸಲ್ಪಟ್ಟಿರುವುದು. ಜಾತಿರಹಿತ, ಧರ್ಮರಹಿತ, ವರ್ಗರಹಿತ, ತತ್ವಸಹಿತ ಸಮಾಜ ನಿರ್ಮಾಣದ ಉದ್ದೇಶ ಅವರ ಕನಸು ಪ್ರಸ್ತುತ ಬುಡಮೇಲಾಗಿರುವುದು ವಿಷಾದನೀಯ ಸಂಗತಿಯಾಗಿದೆ.

ಮೇದರ ಕೇಕಯ್ಯ ಬಿದಿರು ಕಡಿಯುವಾಗ ಕೆಳಗೆ ಬೀಳುತ್ತಾನೆ. ಎದೆಗೆ ಬಿದಿರು ಮೊಳೆ ಚುಚ್ಚಿ ಕೇಕಯ್ಯ ಶಿವಸನ್ನಿದಿ ಸೇರುತ್ತಾನೆ. ಆಗ ಬಸವಣ್ಣ ಮಾಚಯ್ಯನನ್ನು ಕರೆಸುತ್ತಾನೆ. ಮಾಚಯ್ಯ ಬಂದು ಶಿವಶರಣರ ಪ್ರಾಣವೇ ತನ್ನ ಪ್ರಾಣವೆಂದು ನಂಬಿದ ಬಸವಣ್ಣ ಇನ್ನೂ ಜೀವಂತವಾಗಿದ್ದು ತನ್ನ ವಚನ ಪಾಲಿಸಿಲ್ಲವೆಂದು ಹೇಳಿದನೆಂಬುದನ್ನರಿತ ಬಸವಣ್ಣ ಪ್ರಾಣ ಬಿಡುವನು. ಆ ಪ್ರಾಣ ಕೇತಯ್ಯನನ್ನು ಹಿಂಬಾಲಿಸುತ್ತದೆ. ಬಸವಣ್ಣನ ನಿಷ್ಠೆ ಮೆಚ್ಚಿದ ಮಾಚಯ್ಯ ಶಿವನನ್ನು ಕುರಿತು ಈ ರೀತಿ ಕೆರಳಿ ನುಡಿಯುತ್ತಾನೆ. "ಏ ಶಿವನೇ ಕಾಯಕ ನಿಷ್ಠೆಯುಳ್ಳವನಿಗೆ, ಶರಣನಿಗೆ, ಧರ್ಮನಿಷ್ಠೆಯುಳ್ಳವನಿಗೆ ಸ್ವಧರ್ಮವನ್ನು ರಕ್ಷಣೆ ಮಾಡುವವನಿಗೆ, ನ್ಯಾಯ ನಿಷ್ಪಕ್ಷಪಾತವಾಗಿ ಬದುಕುವವನಿಗೆ, ತಾನು ದುಡಿದುದರಲ್ಲಿ ಯಾರ ಹಂಗಿಲ್ಲದೆ ಬೇರೆಯವರಿಗೆ ದಾನ ಮಾಡುವವನಿಗೆ ಜೀವವನ್ನು ಕೊಡದೆ ಇನ್ಯಾರಿಗೆ ಕೊಡುತ್ತೀಯಾ? ಆ ಶರಣರ ಉತ್ಕೃಷ್ಟತೆ ನಿನಗೆ ಗೊತ್ತೇ?" ಎಂದು ಏಕವಚನದಲ್ಲಿ ಶಿವನನ್ನು ಪ್ರಶ್ನೆ ಮಾಡಿ ಇಬ್ಬರ ಪ್ರಾಣಗಳನ್ನು ಮರಳಿ ಪಡೆದನೆಂದು ತಿಳಿದು ಬರುತ್ತದೆ. ಇದು ಪುರಾಣದ ಸಂಗತಿಯಾದರೂ ಇವರ ಹೋರಾಟ ಶರಣರ ಉಳಿವಿಗಾಗಿ ಶರಣರ ರಕ್ಷಣೆಗಾಗಿ ಎಂಬುದು ಅಪ್ಪಟ ಸತ್ಯವಾಗಿದೆ. ನಡೆ-ನುಡಿಯಲ್ಲಿ ತಪ್ಪಿದ ವ್ಯಕ್ತಿ ಎಂಥವರೇ ಆಗಿರಲಿ ಆಚರಣೆ ಪ್ರಸಂಗ ಬಂದಾಗ ದೇವರನ್ನೂ ಕೂಡ ಪ್ರಶ್ನಿಸುವ ಪ್ರವೃತ್ತಿ ಮಾಚಯ್ಯನದಾಗಿತ್ತು ಎಂಬುದಕ್ಕೆ ಇದು ಉದಾಹರಣೆಯಾಗಿದೆ.

ಅನುಭವ ಮಂಟಪ ಕಟ್ಟುವಲ್ಲಿ ಮಡಿವಾಳ ಮಾಚಿದೇವರ ಕಾಯಕ ಅತಿ ಮಹತ್ವದ್ದು. ದೇಶದ ನಾನಾ ಭಾಗಗಳಿಂದ ಕಲ್ಯಾಣಕ್ಕೆ ಬರುವವರಿಗೆ ಪರೀಕ್ಷಿಸಿ ಮಡಿ ಹಾಸಿ

ಸ್ವಾಗತಿಸುವ ಕೆಲಸ ಅವರದಾಗಿತ್ತು. ಮಾಚಿದೇವರ ಪರೀಕ್ಷೆಗೊಳಪಡದ ಹೊರತು ಕಲ್ಯಾಣಕ್ಕೆ ಪ್ರವೇಶವಿರಲಿಲ್ಲವೆಂಬುದು ಮಾಚಯ್ಯನ ಮಹಾ ಘನತೆಗೆ ಸಾಕ್ಷಿಯಾಗಿದೆ.

**ಪ್ರಭುತ್ವಕ್ಕೆ ಸವಾಲೆಸೆದ ಮಾಚಿದೇವ:**

ಬಿಜ್ಜಳನು ಶರಣರ ಈ ನಡೆಯ ಬಗ್ಗೆ ತನ್ನ ಅಭಿಮತವಿದ್ದರೂ ಕುಹಕಿಗಳ ಮಾತಿಗೆ ಬಲಿಯಾಗಿ ತನ್ನ ಮೈಲಿಗೆಯಾಗಿದ್ದ ಬಟ್ಟೆಗಳನ್ನು ಮಡಿಮಾಡಿಸಿ ಕೊಡಲು ಬಸವಣ್ಣನಿಗೆ ದುಂಬಾಲು ಬಿದ್ದನು. ಆಗ ಬಸವಣ್ಣ ಮಾಚಿದೇವನನ್ನು ಅಗಸನೆಂದು ಭಾವಿಸದಿರಲು ತಿಳಿ ಹೇಳುತ್ತಾನೆ. ಅದನ್ನು ಲೆಕ್ಕಿಸದೆ ಬಿಜ್ಜಳ ಮಾಸಿದ ಬಟ್ಟೆಗಳ ಗಂಟನ್ನು ಕೊಟ್ಟು ಕಳಿಸಿದಾಗ ಮಾಚಿದೇವ 'ಮೈಲಿಗೆಯನ್ನು ತೊಳೆಯುವುದು ಮಡಿವಾಳನಾದ ನನ್ನ ಕಾಯಕವೇ ಸರಿ. ಆದರೆ ಭಕ್ತಿಯಿಲ್ಲದವನ, ಕಳ್ಳನ ಮನೆಯ, ಡಾಂಭಿಕನ ಮನೆಯ, ಸ್ವಧರ್ಮ ನಿಷ್ಠೆಯುಳ್ಳವನ ಮತ್ತು ಕಾಯಕ ನಿಷ್ಠೆಗೆ, ಶರಣತತ್ವಕ್ಕೆ ವಿರೋಧವಾದವರ ಮನೆಯ ಮೈಲಿಗೆಯನೆಂದು ನಾನು ತೊಳೆಯುವುದಿಲ್ಲ' ಎಂದು ಭವಿ ಬಿಜ್ಜಳನ ಮೈಲಿಗೆ ಬಟ್ಟೆಯ ಗಂಟನ್ನು ಕಂಡ ಮಡಿವಾಳಯ್ಯ ಕೋಪಗೊಂಡು ಸಿಟ್ಟಿನಿಂದ ನೋಡಲು ಆ ಕ್ಷಣದಲ್ಲಿ ಗಂಟು ಉರಿದು ಹೋಯ್ತು. ಇದು ಮಡಿವಾಳಯ್ಯನ ಅಹಂಕಾರವೆಂದು ಭಾವಿಸಿ ಬಿಜ್ಜಳ ಮಡಿವಾಳ ಮಾಚಿದೇವ ಎಲ್ಲೆಲ್ಲಿ ಬಟ್ಟೆ ತೊಳೆಯುವನೋ ಅಲ್ಲಿಗೆಲ್ಲ ಸೈನಿಕರನ್ನು ಹಾಕಿ ತೊಳೆಯದಂತೆ ನೋಡಿಕೊಳ್ಳಲು ಎಚ್ಚರಿಕೆ ನೀಡುತ್ತಾನೆ. ಆಗ ಮಾಚಯ್ಯನು ತನ್ನ ಹೆಂಡತಿಯೊಂದಿಗೆ ಹೀಗೆ ಸಮಾಲೋಚಿಸುತ್ತಾನೆ. ಎಂದೂ ನೀಡದ ಪರೀಕ್ಷೆಯನ್ನು ಶಿವ ಇಂದು ನೀಡಿದ್ದಾನಲ್ಲ ಸೋಲಬಾರದು ಎಂದಾಗ ಆ ಮಹಾಸಾಧ್ವಿ ನೀವೆಂದು ಸೋಲಬಾರದು ಎನ್ನ ಎದೆಯ ಬಗೆದು ಆ ರಕ್ತದಲ್ಲಿ ಮಡಿಮಾಡಿರೆಂದು ಹೇಳುತ್ತಾಳೆ. ಹೀಗೂ ಕೂಡ ಎನ್ನ ಆದೇಶವನ್ನು ಯಕಶ್ಚಿತ್ ಒಬ್ಬ ಮಡಿವಾಳ ತಿರಸ್ಕರಿಸಿದನಲ್ಲ ಎಂದು ಇವನನ್ನು ಎದುರಿಸಲು ದೊಡ್ಡ ಸೈನ್ಯವೇಕೆ ಎಂದು ಕುಂಟರು, ಕುರುಡರು, ಹೆಳವರ ಒಂದು ಸೈನ್ಯ ತುಕಡಿಯನ್ನು ಕಳುಹಿಸಿಕೊಡುತ್ತಾನೆ. ಮಾಚಿದೇವನ ತೇಜಸ್ಸಿನಿಂದ/ತಪೋಬಲದಿಂದ, ಕಾಯಕ ನಿಷ್ಠೆಯಿಂದ ಅಲ್ಲಿ ಬಂದಂತಹ ಎದುರಾಳಿಗಳ ನ್ಯೂನ್ಯತೆಗಳೆಲ್ಲ ಮಾಯವಾಗಿ ಕಣ್ಣು, ಕಾಲು, ದೇಹವೆಲ್ಲ ಸದೃಡವಾಗುವಂತೆ ಮಾಡುತ್ತಾನೆ. ಇವರೆಲ್ಲರೂ ಶರಣತ್ವಕ್ಕೆ ಅನುಯಾಯಿಗಳಾಗುತ್ತಾರೆ.

ಮತ್ತಷ್ಟು ರೋಷಗೊಂಡಂತಹ ಬಿಜ್ಜಳ ರಾಜ ಮದವೇರಿದ ಆನೆಗಳುಳ್ಳ ಒಂದು ಸೈನ್ಯವನ್ನು ಕಳಿಸಿಕೊಡುತ್ತಾನೆ. ಆಗ ಮಾಚಿದೇವ ನಾನು ಕೇವಲ ಮಡಿವಾಳನಲ್ಲ ಕೇವಲ ಶರಣ ತತ್ವದ ಸಾಹಿತ್ಯದ ಬೋಧಕನಲ್ಲ, ಕಾಯಕ ನಿಷ್ಠೆಯ ಅಂಧಾನುಯಾಯಿಯಲ್ಲ ಎಂದು ಕತ್ತಿ ಹಿಡಿದು ಹೋರಾಡುತ್ತಾನೆ. ಆಗ ಬಿಜ್ಜಳ ಇವನ ನ್ಯಾಯಯುತ ಹೋರಾಟಕ್ಕೆ ಪ್ರಭಾವಿತನಾಗುತ್ತಾನೆ.

**ಮಾಚಿದೇವರ ವಚನಗಳು:**

ಮಾಚಿದೇವರು ಸುಮಾರು 360 ವಚನಗಳನ್ನು ರಚಿಸಿದ್ದು ಕೆಲವೊಂದನ್ನು ಇಲ್ಲಿ ಗಮನಿಸಬಹುದಾಗಿದೆ.

**1**

**ಆ ಜಾತಿ ಈ ಜಾತಿಯವರೆನಬೇಡ**
**ಹದಿನೆಂಟು ಜಾತಿಯೊಳಗಾದ ಜಾತಿಯಾದಡೂ ಆಗಲಿ**
**ಗುರು ಕಾರುಣ್ಯವ ಪಡೆದು ಅಂಗದ ಮೇಲೆ ಲಿಂಗವ ಧರಿಸಿ**
**ಪುನರ್ಜಾತರಾದ ಬಳಿಕ ಭಕ್ತರಾಗಲಿ ಜಂಗಮರಾಗಲಿ**
**ಗುರುವಿನ ವೇಷವಿದ್ದವರ ಗುರುವೆಂದು ನಂಬಿ**
**ದಾಸೋಹವ ಮಾಡುವುದೆ ಸದಾಚಾರ**
**ಗುರುವನತಿಗಳೆದು ಗುರುವಾಜ್ಞೆಯ ಮೀರಿ**
**ಗುರು ಕೊಟ್ಟ ಪಂಚಮುದ್ರೆಗಳ ಮೇಲೆ**
**ಅನ್ಯ ಸಮಯ ಮುದ್ರೆಯ ಲಾಂಛನಾಂಕಿತರಾಗಿ**
**ಗುರುದ್ರೋಹಿಗಳಾಗಿ ಬಂದವರ**
**ಜಂಗಮವೆಂದು ಕಂಡು ನಮಸ್ಕರಿಸಿ ಆರಾಧಿಸಿ**
**ಪ್ರಸಾದವ ಕೊಂಡವರಿಗೆ ನಾಯಕ ನರಕ ತಪ್ಪದೆಂದ**
**ಕಲಿದೇವಯ್ಯ**

**2**

**ಬಸವಣ್ಣ ಮಾಡಲಿಕ್ಕೆ ಗುರುವಾಯಿತ್ತು**
**ಬಸವಣ್ಣ ಮಾಡಲಿಕ್ಕೆ ಲಿಂಗವಾಯಿತು**
**ಬಸವಣ್ಣ ಮಾಡಲಿಕ್ಕೆ ಜಂಗಮವಾಯಿತ್ತು**
**ಬಸವಣ್ಣ ಮಾಡಲಿಕ್ಕೆ ಪ್ರಸಾದವಾಯಿತ್ತು**
**ಬಸವಣ್ಣ ಮಾಡಲಿಕ್ಕೆ ಈರೇಳು ಮೋಕ್ಷವಾಯಿತ್ತು**
**ಬಸವಣ್ಣನಿಂದಾದ ಕಲಿದೇವಯ್ಯ**

**3**

**ಉಡಿಯ ಲಿಂಗವ ಬಿಟ್ಟು**
**ಗುಡಿಯ ಲಿಂಗಕ್ಕೆ ಶರಣೆಂಬ**
**ಮತಿಭ್ರಷ್ಟರನೇನೆಂಬೆನಯ್ಯಾ**
**ಕಲಿದೇವರದೇವ**

## ಶರಣ- ಸಾಹಿತ್ಯ,ಸಂಸ್ಕೃತಿಯ ರಕ್ಷಣೆಗಾಗಿ ಹೋರಾಟಗಾರನಾದ ಮಾಚಯ್ಯ:

ಆದಿಗೊಂದು ಅಂತ್ಯವಿರುವಂತೆ ಕಲ್ಯಾಣದಲ್ಲಿ ಶರಣ ಸಾಹಿತ್ಯ ಪ್ರಚಾರ, ವಿಚಾರಧಾರೆ, ಚಳುವಳಿ, ಅಂತರಜಾತಿ ವಿವಾಹ, ಎಲ್ಲರನ್ನು ವೀರಶೈವ ಜಾತಿಗೆ ಸೇರಿಸಿಕೊಳ್ಳುವುದು ಇಂತಹ ಚಳುವಳಿಗಳೆಲ್ಲ ನಡೆಯುವಾಗ ಅಂಧಾನುಯಾಯಿಗಳು ಬಿಜ್ಜಳನ ಕಿವಿಯನ್ನು ಚುಚ್ಚಿ "ಯಾರು ಶರಣರಾಗಿದ್ದಾರೋ ಅವರನ್ನೆಲ್ಲ ಕೊಲ್ಲಿ"ಎಂಬ ಆದೇಶ ನೀಡುತ್ತಾನೆ. ನಿಂತು ನಿಂತಲ್ಲಿ ಶರಣರ ಹತ್ಯೆಯಾಗುತ್ತದೆ. ಯಾವ ತ್ರಿವಿಧ ದಾಸೋಹದ ರಂಗಭೂಮಿಯಾಗಿದ್ದ ಮಹಾಮನೆ ರಕ್ತಥೋಕುಳಿಯ ಸಾಗರವಾಗುತ್ತದೆ. ಶರಣರ ಅವನತಿ ಹಾಗೂ ಬಿಜ್ಜಳನ ಅಂತ್ಯ ಸಮೀಪವಾಗುತ್ತಿದೆ ಎಂದು ಬಸವಣ್ಣನಿಗೆ ಅರಿವಾಗುತ್ತದೆ. ಗಣಂನಲ್ಲಿದ್ದ 780 ಶರಣ ಪ್ರಮುಖರ ಮೇಲೆ ಬಸವಣ್ಣನಿಗೆ ನಂಬಿಕೆಯಿಲ್ಲದೆ ಮಾಚಿದೇವನಿಗೆ ಹೇಳುತ್ತಾನೆ. ಈ ಶರಣರನ್ನು, ಶರಣ ಸಾಹಿತ್ಯವನ್ನು,

ಶರಣ ಸಂಸ್ಕೃತಿಯನ್ನು ರಕ್ಷಿಸುವ ರಾಯಭಾರಿಯಾಗಲು ನಿನಗೊಬ್ಬನಿಗೆ ಸಾಧ್ಯವೆಂದು 'ಗಣಧಾರಿ' ಎಂಬ ಪಟ್ಟವನ್ನು ಕೊಡುತ್ತಾನೆ. ತನ್ನ ಮನನೊಂದು ಕೂಡಲಸಂಗಮದತ್ತ ಬಸವಣ್ಣ ಪ್ರಯಾಣ ಮಾಡುತ್ತಿರುವಾಗ ಯಾವ ಬಸವನಿಗೆ ನಾನು ವಚನವನ್ನಿತ್ತಿದ್ದೇನೊ ಚನ್ನಬಸವಣ್ಣನನ್ನು ರಕ್ಷಿಸುವ ಶರಣೆಯರನ್ನು ರಕ್ಷಿಸುವ ಹೊಣೆ ತನ್ನದೆಂದು ಕತ್ತಿ ಹಿಡಿದವನು ಕೊನೆಯವರೆಗೂ ಹೋರಾಡುತ್ತಾನೆ.

ಕಲ್ಯಾಣದಲ್ಲಿ ನಡೆದಂತಹ ಕ್ರಾಂತಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಶರಣರ ಹೋರಾಟ ಅನುಕರಣೀಯವಾಗಿದೆ. ಇಡೀ ವಿಶ್ವಕ್ಕೆ ಕನ್ನಡ ಸಾಹಿತ್ಯ ನೀಡಿದ್ದಂತಹ ಕೊಡುಗೆ ಎಂದರೆ ವಚನ ಸಾಹಿತ್ಯ. 6,000 ಆಡುಭಾಷೆ, ಉಪಭಾಷೆಗಳಲ್ಲೆಲ್ಲೂ ಇಂತಹ ವಿಶೇಷವಾದ ವಚನ ಸಾಹಿತ್ಯವಿಲ್ಲ. ಸುಮಾರು 360 ವಚನಗಳು ಮಾಚಿದೇವರವಾಗಿದ್ದು ಅವೆಲ್ಲವೂ ಸಮಾಜವನ್ನು ತಿದ್ದುವಂತವು.

ಆನಂತರ ಉಳಿದ ಶರಣರು ಶ್ರೀಶೈಲ, ಸಿದ್ಧಗಂಗೆ, ಶಿವಗಂಗೆ, ಕಪ್ಪಡಿ ಈ ನಾಲ್ಕು ದಿಕ್ಕುಗಳಿಗೆ ಸಾಹಿತ್ಯದ ತಾಳೆಗರಿಗಳನ್ನು ಹೊತ್ತು ನಡೆದರು. ಉಳಿದಂತಹ ಕೆಲವು ಶರಣರನ್ನು ಸೇರಿಸಿ 'ಕಾಯಕ ಮಂಟಪ' ಮಾಡಿದರು. ಈ ತತ್ವಗಳನ್ನು ಪ್ರಚಾರ ಮಾಡಿ ಮುಂದುವರೆಸಿದರು. ಹುಟ್ಟೂರಾದ ದೇವರಹಿಪ್ಪರಗಿಯಲ್ಲಿ ಬಹಳಷ್ಟು ಕಾಲ ಶರಣ ಸಂಸ್ಕೃತಿ, ಶರಣ ತತ್ವವನ್ನು ಸಾರುತ್ತಾ ಬದುಕಿದರು.

## ಪರಾಮರ್ಶನ ಗ್ರಂಥಗಳು:

1. ಶಿವರಾಜಪ್ಪ ಎಸ್. (2010). ಶರಣ ದರ್ಶನ: ಸಮಗ್ರ ಸಾಹಿತ್ಯ-2. ವಿಜಯಲಕ್ಷ್ಮೀ ಪ್ರಕಾಶನ. ಮೈಸೂರು.
2. ಶ್ರೀನಿವಾಸಮೂರ್ತಿ ಎಂ. ಆರ್. (2023). ವಚನ ಧರ್ಮಸಾರ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.